# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 439**
**ಮಾನ್ಯ ಸದಸ್ಯರ ಹೆಸರು : ಡಾ. ಚಂದ್ರಶೇಖರ ಬಸವರಾಜ ಪಾಟೀಲ್ (ಪದವೀಧರರ ಕ್ಷೇತ್ರ)**
**ಉತ್ತರಿಸುವ ದಿನಾಂಕ : 12-12-2024**
**ಉತ್ತರಿಸುವ ಸಚಿವರು : ಗೃಹ ಸಚಿವರು**

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| (ಅ) | ಬೀದರ್ ಜಿಲ್ಲೆ ಹುಮನಾಬಾದ ತಾಲ್ಲೂಕಿನ ಹಳ್ಳಿಖೇಡ ಬಿ ಪಟ್ಟಣದ ಪುರಸಭೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಕೊಠಡಿ ಉದ್ಘಾಟನೆ ಸಮಾರಂಭವನ್ನು ಅಡ್ಡಿಪಡಿಸಿದ 14 ಜನರ ಮೇಲೆ ಹಳ್ಳಿಖೇಡ ಬಿ ಪಟ್ಟಣದಲ್ಲಿರುವ ಪೊಲೀಸ್ ಠಾಣೆಯಲ್ಲಿ ಕೇಸ್ ದಾಖಲಿಸಿ, ಬೀದರ್ ಗಾಂಧಿಗಂಜ್ ಪೊಲೀಸ್ ಸರ್ಕಲ್ ಕಛೇರಿಗೆ ಸ್ಥಳಾಂತರ ಮಾಡಲು ಕಾರಣವೇನು; (ವಿವರ ನೀಡುವುದು) | ರಾಜಕೀಯ ಕಾರ್ಯಕರ್ತರ ನಡುವೆ ರಾಜಕೀಯ ವೈಷಮ್ಯ ಇದ್ದು ಸ್ಥಳೀಯ ತನಿಖಾಧಿಕಾರಿಯವರ ಮೇಲೆ ಎರಡೂ ಪಕ್ಷದ ಕಡೆಯಿಂದ ಒತ್ತಡ ಬರುವ ಸಾಧ್ಯತೆ ಇರುವುದರಿಂದ ಹಳ್ಳಿಖೇಡ ಪಿಎಸ್ಐ ಬದಲಾಗಿ ಬೀದರ್ ನಗರದ ಗಾಂಧಿಗಂಜ್ ಠಾಣೆಯ ಪಿಐ ರವರಿಗೆ ಪ್ರಕರಣವನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ವರ್ಗಾವಣೆ ಮಾಡಲಾಗಿದೆ. |
| (ಆ) | ಈ ಕೇಸನ್ನು ದಾಖಲಿಸಿ ಎರಡು ತಿಂಗಳಾದರು ಇಲ್ಲಿಯವರೆಗೆ ಯಾವುದೇ ಕಾನೂನು ರೀತಿ ಕ್ರಮ ಕೈಗೊಳ್ಳದಿರಲು ಕಾರಣವೇನು? (ಮಾಹಿತಿ ನೀಡುವುದು) | ಇದೊಂದು Non-heinous ಪ್ರಕರಣವಾಗಿದ್ದು, ಮಾನ್ಯ ಸರ್ವೋಚ್ಛ ನ್ಯಾಯಾಲಯದ Lalitakumari V/S Government of UP and Others ಪ್ರಕರಣದಲ್ಲಿ ಆದೇಶಿಸಿದಂತೆ ಸದರಿ ಪ್ರಕರಣದಲ್ಲಿ ಹೆಚ್ಚಿನ ಶಿಕ್ಷೆಯುಳ್ಳ ಕಲಂ ಭಾರತೀಯ ನ್ಯಾಯಾ ಸಂಹಿತೆ 2023 ಕಲಂ 189(2) (2 ವರ್ಷ ಜೈಲು ಶಿಕ್ಷೆ ಅಥವಾ ದಂಡ) ಇದ್ದುದರಿಂದ ಕಲಂ 35(3) ಬಿಎನ್ ಎಸ್ಎಸ್ ಪ್ರಕಾರ 1 ರಿಂದ 14ರವರೆಗಿನ ಆರೋಪಿಗಳಿಗೆ ದಿನಾಂಕ :22.11.2024ರಂದು ನೋಟಿಸ್ ಜಾರಿ ಮಾಡಿದ್ದು, ಸದರಿಯವರು ದಿನಾಂಕ :23.11.2024 ರಂದು ತನಿಖಾಧಿಕಾರಿಗಳ ಮುಂದೆ ಹಾಜರಾಗಿರುತ್ತಾರೆ. ದಿನಾಂಕ :28.11.2024 ರಂದು ಈ ಎಲ್ಲಾ ಆರೋಪಿತರ ವಿರುದ್ಧ ಮಾನ್ಯ ನ್ಯಾಯಾಲಯದಲ್ಲಿ ದೋಷಾರೋಪಣಾ ಪತ್ರವನ್ನು ಸಲ್ಲಿಸಲಾಗಿದೆ. ಮಾನ್ಯ ನ್ಯಾಯಾಲಯವು ಪ್ರಕರಣದ ಸಂಜ್ಞೆ ತೆಗೆದುಕೊಳ್ಳುವ ಕುರಿತು ಬಾಕಿ ಇರುತ್ತದೆ. |

ಸಂಖ್ಯೆ: ಹೆಚ್‌ಡಿ 67 ಪಿಸಿಕ್ಯೂ 2024

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು